ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp. 144-148.
©*IIMRD*, Mysuru
IIMRD JOURNALS
www.iimrd.com

# ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ಮಾಪಕರಾಗಿ ದೇ.ಜವರೇಗೌಡ

**ಚಿದಾನಂದ ಕೆ.ಡಿ.**
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

## ಸಾರಾಂಶ (Abstract)

*ಕನ್ನಡದ, ಕನ್ನಡಿಗರ, ಕರ್ನಾಟಕದ, ಸರ್ವಮುಖ, ಅಭ್ಯುದಯಕ್ಕಾಗಿ, ಸ್ಥಾನಮಾನ ಸಂರಕ್ಷಣೆಗಾಗಿ, ಸ್ವಾಭಿಮಾನ, ಸಂವರ್ಧನೆಗಾಗಿ, ಶಕ್ತಿ ವಿಕಾಸಕ್ಕಾಗಿ, ಅಂತರಂಗ ಪ್ರವೇಶಕ್ಕಾಗಿ ಹಿಂದಿನಿಂದಲೂ ಹಲವು ಮಹಾನೀಯರು ತಮ್ಮ ಸಾಧನ, ಸಂಪತ್ತು, ವಿದ್ವತ್ತು, ವರ್ಚಸ್ಸು, ಕೌಶಲಗಳನ್ನು ಪಣವಾಗಿಟ್ಟು ದುಡಿದಿದ್ದಾರೆ ಹಾಗೂ ದುಡಿಯುತ್ತಿದ್ದಾರೆ. ಅಂತವರ ಸಾಲಿನಲ್ಲಿ ಅತ್ಯಂತ ವಿಶಿಷ್ಟವೂ ಉಜ್ವಲವೂ ಆದ ಹೆಸರು ದೇ.ಜವರೇಗೌಡ ಅವರದು.* ಪ್ರಸ್ತುತ ಅಧ್ಯಯನದಲ್ಲಿ ದೇ.ಜವರೇಗೌಡರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ಮಾಪಕರಾಗಿ *ಕನ್ನಡ ಅಧ್ಯಯನ ಸಂಸ್ಥೆಯ ಅಭಿವೃದ್ಧಿಗಾಗಿ* ಸಲ್ಲಿಸಿದ ಸೇವೆ ಮತ್ತು ಅವರ ಅವಿಸ್ಮರಣೀಯ ಕೊಡುಗೆಗಳನ್ನು ನೀಡಿರುವುದನ್ನು ಚರ್ಚಿಸಲಾಗಿದೆ.

**ಮುಖ್ಯಪದಗಳು (Keywords):** *ಕುವೆಂಪು, ಕನ್ನಡ ಅಧ್ಯಯನ ಸಂಸ್ಥೆ,* ಶಿಕ್ಷಣ, ಏಕೀಕರಣ.

### ಪೀಠಿಕೆ

20ನೆಯ ಶತಮಾನದ 6, 7ನೆಯ ದಶಕಗಳ ಕನ್ನಡದ ಇತಿಹಾಸ ದೇ.ಜವರೇಗೌಡರು ಅವರ ಶಕ್ತಿ, ಸಾಹಸ, ಕರ್ತೃತ್ವ, ಸಾಮರ್ಥ್ಯ ಸಂಘಟ ಕೌಶಲಗಳ ರೋಮಾಂಚಕ ಗಾಥೆ. ಆ ದಿನಗಳಲ್ಲಿ ಅವರ ಹೆಸರು ಕನ್ನಡ ಕಿಂಕರರ ಸ್ಫೂರ್ತಿ ಮಂತ್ರವಾಗಿತ್ತು; ಕನ್ನಡ ವಿರೋಧಿಗಳಿಗೆ ಸಿಂಹಸ್ವಪ್ನವಾಗಿತ್ತು. ಹಿಂದುಳಿದ ಹಳ್ಳಿಯೊಂದರ ಅನಕ್ಷರಸ್ಥ ಬಡ ಕುಟುಂಬದಲ್ಲಿ ಹುಟ್ಟಿದ ಈ ವ್ಯಕ್ತಿ ದಾರಿದ್ರ್ಯ, ದೈನ್ಯ ಸಂಕೋಚ ಶೀಲತೆಗಳ ಸಂಗಮವಾಗಿದ್ದ ವ್ಯಕ್ತಿ, ಕನ್ನಡದ ಮಹಾಶಕ್ತಿಯಾಗಿ ರೂಪುಗೊಂಡದ್ದು ಒಂದು ಅವಿಸ್ಮರಣೀಯ ಸಂಗತಿ.

ದೇ.ಜವರೇಗೌಡರು ಜುಲೈ 6, 1918ರಲ್ಲಿ ಚನ್ನಪಟ್ಟಣ ತಾಲೂಕಿನ ಮುದಿಗೆರೆಯ ದೇವೇಗೌಡ, ಚನ್ನಮ್ಮ ದಂಪತಿಗಳ ಎರಡನೆಯ ಮಗನಾಗಿ ಜನಿಸಿದರು. ದೇ.ಜವರೇಗೌಡರು ಕನ್ನಡ ಲೋಯರ್ ಶಿಕ್ಷಣವನ್ನು ತಮ್ಮ ಗ್ರಾಮದಲ್ಲಿ, ಪ್ರೌಢಶಾಲಾ ಶಿಕ್ಷಣವನ್ನು ಚನ್ನಪಟ್ಟಣದಲ್ಲಿ ಪೂರ್ಣಗೊಳಿಸಿದರು. ವಿದ್ಯಾ ಆಕಾಂಕ್ಷೆಯನ್ನು ಹೊಂದಿದ್ದ ದೇ.ಜವರೇಗೌಡರು ಮುಂದಿನ ಶಿಕ್ಷಣವನ್ನು ಪಡೆಯಲು ಬೆಂಗಳೂರಿನಲ್ಲಿ ಇಂಟರ್ ಮೀಡಿಯಟ್‌ಗೆ ಸೇರಿಕೊಂಡರು. ಈ ಸಂದರ್ಭದಲ್ಲಿ ದೇ.ಜವರೇಗೌಡರ ಮೇಲೆ ಕುವೆಂಪು ಅವರ ಪ್ರಭಾವವಾಯಿತು. ಈ ಪ್ರಭಾವವೇ ದೇ.ಜವರೇಗೌಡರು ಬಿ.ಎ. ಆನರ್ಸ್ ಪದವಿ ಅಧ್ಯಯನ ಮಾಡಲು ಕಾರಣವಾಯಿತು. ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ ಪದವಿಯನ್ನು 1941ರಲ್ಲಿ

*Please cite this article as: ಚಿದಾನಂದ ಕೆ.ಡಿ. (2022). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ಮಾಪಕರಾಗಿ ದೇ.ಜವರೇಗೌಡ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 144–148.*

ಪಡೆದರು. ಅನಂತರ ಇದೇ ವರ್ಷ ವಿದ್ಯಾ ಇಲಾಖೆಯಲ್ಲಿ ಗುಮಾಸ್ತ ಹುದ್ದೆ ದೊರೆಯಿತು. ಆದರೆ ಅಲ್ಲಿನ ನಡವಳಿಕೆಗಳಿಂದ ಬೇಸತ್ತು ಹುದ್ದೆಗೆ ರಾಜೀನಾಮೆ ನೀಡಿ ಪುನಃ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಕನ್ನಡ ಪದವಿಯನ್ನು ಪಡೆಯಲು ಮಹಾರಾಜ ಕಾಲೇಜಿಗೆ ಸೇರಿಕೊಂಡರು. ಎಂ.ಎ. ವಿದ್ಯಾರ್ಥಿಯಾಗಿದ್ದಾಗ ರಾಮಕೃಷ್ಣ ಮಠದಲ್ಲಿಯೇ ವಾಸ, ಕಾಲೇಜಿನಲ್ಲಿ ವಿದ್ಯೆ, ಸಂಸ್ಕೃತಿ, ಸಂಪ್ರೀತಿಗಳೇ ಮೈವೆತ್ತಂತಿದ್ದ ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀಕಂಠಯ್ಯ, ಕುವೆಂಪು ಮೊದಲಾದವರ ಪಾಠಗಳೇ ರಸದೌತಣ. ಅವರ ಬದುಕಿನ ಚಿತ್ರಣ, ಅನುಭವ, ಅಭ್ಯಾಸ, ವಿಚಾರ ಶಕ್ತಿಗಳು ವಿಕಾಸಗೊಳ್ಳಲು ಕಾರಣವಾಗಿವೆ.

ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರೆಂದು ಬೆಂಗಳೂರು ಸೆಂಟ್ರಲ್ ಕಾಲೇಜಿಗೆ 1946ರಲ್ಲಿ ಕೆಲಸಕ್ಕೆ ಸೇರಿದರು. ಅಂದು ವಿಶ್ವವಿದ್ಯಾನಿಲಯದಲ್ಲಾಗಲಿ, ಸರ್ಕಾರದಲ್ಲಾಗಲಿ ಕನ್ನಡದ ಸ್ಥಾನಮಾನ ಅತ್ಯಂತ ಶೋಚನೀಯ ಸ್ಥಿತಿಯಲ್ಲಿತ್ತು. ಕುವೆಂಪು ಅವರ ದಟ್ಟ ಪ್ರಭಾವ ಇವರನ್ನು ಕನ್ನಡಕ್ಕೆ ಕೈ ಎತ್ತುವಂತೆ ಸರ್ವ ವಿಧಾನದಲ್ಲೂ ಸಹಕಾರಿಯಾಯಿತು. ದೇ.ಜವರೇಗೌಡರು ಮೂರು ವರ್ಷಗಳ ಕಾಲ ಸೆಂಟ್ರಲ್ ಕಾಲೇಜಿನಲ್ಲಿದ್ದು, ನಂತರ ಮೈಸೂರಿನ ಮಹಾರಾಜ ಕಾಲೇಜಿಗೆ ವರ್ಗವಾಗಿ ಬಂದರು. 1955ರಲ್ಲಿ ದೇ.ಜವರೇಗೌಡರು ಸಹಾಯಕ ಪ್ರಾಧ್ಯಾಪಕರಾದರು. ಆ ವರ್ಷವೇ ವಿಶ್ವವಿದ್ಯಾನಿಲಯದ ಪ್ರಕಟಣ ವಿಭಾಗದ ಕಾರ್ಯದರ್ಶಿಯಾಗಿ ನೇಮಕಗೊಂಡರು. ಕುವೆಂಪು ಕಲ್ಪನೆಯ 'ಪ್ರಸಾರಾಂಗ'ಕ್ಕೆ ಭದ್ರವಾದ ಅಡಿಪಾಯ ಹಾಕಿದ್ದು ಇವರೇ. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ ಮಾನಸ ಗಂಗೋತ್ರಿ ಆವರಣಕ್ಕೆ ಹೊಸದಾಗಿ ಅಧ್ಯಯನ ವಿಭಾಗಗಳನ್ನು ವರ್ಗಾಹಿಸಲು ಆದೇಶವಿತ್ತರು. ಆಗ ಕನ್ನಡ ವಿಭಾಗ ಪ್ರೊ.ತೀ.ನಂ.ಶ್ರೀಕಂಠಯ್ಯ ಅವರ ನೇತೃತ್ವದಲ್ಲಿ ಹೊಸ ಜಾಗದಲ್ಲಿ ಕಾರ್ಯಾರಂಭ ಮಾಡಿತು. ಇದಕ್ಕೆ ಬೆಂಬಲವಾಗಿ ನಿಂತವರು ದೇ.ಜವರೇಗೌಡರು. ಆಗಿನ ಅತ್ಯಂತ ಪರಿಮಿತ ಸೌಲಭ್ಯಗಳಲ್ಲಿ ಗಂಗೋತ್ರಿ ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ವಿದ್ಯಾರ್ಥಿಗಳ ಬದುಕನ್ನು ಸುಗಮಗೊಳಿಸಿಕೊಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ತೀ.ನಂ.ಶ್ರೀ ಅವರು ನಿವೃತ್ತಿಯಾದ ನಂತರ ದೇ.ಜವರೇಗೌಡರು ಕನ್ನಡ ವಿಭಾಗದ ಮುಖ್ಯಸ್ಥರಾದರು. ಆಗ ಕನ್ನಡಕ್ಕೆ ಯುಕ್ತವಾದ ಸ್ಥಾನಮಾನ ದೊರೆಯಬೇಕಾದರೆ ಅದು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಬೇಕಾದರೆ ಎರಡು ಬಗೆಯ ಚಳುವಳಿಯ ಅಗತ್ಯವೆಂದು ಅರಿತ್ತಿದ್ದರು. ಒಂದು ರಾಜಕೀಯ ಚಳುವಳಿ, ಮತ್ತೊಂದು ಸಾಂಸ್ಕೃತಿಕ ಚಳುವಳಿ. ಈ ಎರಡು ಚಳುವಳಿಯಿಂದ ಮಾತ್ರ ಕರ್ನಾಟಕ ಏಕೀಕರಣ ಸಾಧ್ಯವಾಯಿತೆಂದು ಮನಗಂಡಿದ್ದರು. ಕನ್ನಡದ ಸರ್ವಾಂಗೀಣ ಪ್ರಗತಿಯಿಂದ ಮಾತ್ರ ಅದಕ್ಕೆ ಸರ್ವಮಾನ್ಯತೆ ಒದಗುತ್ತದೆಂಬುದು ಸರ್ವವೇದ್ಯ ಸಂಗತಿ. ಸಕಲ ಸಾಂಸ್ಕೃತಿಕ ಚಟುವಟಿಕೆಗಳು ಒಂದು ಕೇಂದ್ರದಲ್ಲಿ ಅಥವಾ ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ಕೇಂದ್ರೀಕೃತಗೊಂಡು, ದೂರದರ್ಶಿತ್ವದ ಹಿನ್ನೆಲೆಯಲ್ಲಿ ಸೃಜನಾತ್ಮಕವೂ, ಫಲದಾಯಕವೂ ಆದ ಕಾರ್ಯಕ್ರಮಗಳು ಹಮ್ಮಿಕೊಂಡಾಗ ಮಾತ್ರ ಕನ್ನಡ ಬಹುಬೇಗ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತದೆ ಎಂಬ ಸ್ಪಷ್ಟ ಪರಿಕಲ್ಪನೆಯನ್ನು ಹೊಂದಿದ್ದರು.

ದೇ.ಜವರೇಗೌಡರು ಕನ್ನಡ ಅಧ್ಯಯನ ಸಂಸ್ಥೆಗೆ ಯೋಜನೆಯೊಂದನ್ನು ರೂಪಿಸಿದರು. ಅದರ ವಿವರ ಹೀಗಿದೆ.

- ಕನ್ನಡ ಸ್ನಾತಕೋತ್ತರ ಇಲಾಖೆಯನ್ನು ಸಂಸ್ಥೆಯ ನಾಭಿ ಶಕ್ತಿಯಾಗಿಸುವುದು
- ಪ್ರಾಚ್ಯ ಸಂಶೋಧನಾ ಸಂಸ್ಥೆಯ ಕನ್ನಡ ವಿಭಾಗವನ್ನು ಬೇರ್ಪಡಿಸಿ, ಅಧ್ಯಯನ ಸಂಸ್ಥೆಗೆ ಸೇರಿಸುವುದು
- ಭಾಷಾಂತರ ವಿಭಾಗ ತೆರೆಯುವುದು
- ಭಾಷಾವಿಜ್ಞಾನ ಇಲಾಖೆ ತರೆಯುವುದು
- ವಿಶ್ವಕೋಶಗಳನ್ನು ತಯಾರಿಸುವುದು
- ಜಾನಪದ ವಿಭಾಗವನ್ನು ತೆರೆಯುವುದು, ಈ ವಿಭಾಗದ ಮೂಲಕ ಕನ್ನಡದ ಸರ್ವಾಂಗೀಣ ಅಭಿವೃದ್ಧಿಗಾಗಿ ಚಿಂತಕರ ಚಾವಡಿಯನ್ನು ವ್ಯವಸ್ಥೆಗೊಳಿಸುವುದು
- ಪಠ್ಯಪುಸ್ತಕ ವಿಭಾಗ ತೆರೆಯುವುದು
- ಈ ಸಂಸ್ಥೆಗಾಗಿ ಸುಸಜ್ಜಿತವಾದ ಕಟ್ಟಡ ನಿರ್ಮಿಸುವುದು.

ಈ ಮೇಲಿನವು ಎಲ್ಲವೂ ಅಧ್ಯಯನ ಸಂಸ್ಥೆಯನ್ನು ರೂಪಿಸುವಲ್ಲಿ ದೇ.ಜವರೇಗೌಡರ ಯೋಜನೆಯಾಗಿತ್ತು, ದೇ.ಜವರೇಗೌಡರು ಅಧ್ಯಯನ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾದ ಜಾಗದ ಆಯ್ಕೆಯಿಂದ ಹಿಡಿದು. ಅದರ ಎಲ್ಲ ಹಂತಗಳಲ್ಲಿಯೂ, ಅದು ಸಾಕಾರಗೊಳ್ಳುವಲ್ಲಿ ಅಂದಿನ ಕುಲಪತಿಗಳಾಗಿದ್ದ ಡಾ. ಶ್ರೀ ಮಾಲಿ ಅವರ ಮನೊವಲಿಸಿ ಭೌಗೋಳಿಕವಾಗಿಯೂ ಗಂಗೋತ್ರಿಯ ಕೇಂದ್ರ ಬಿಂದುವಾಗುವಂತಹ, ಎದ್ದು ಕಾಣುವ ಸ್ಥಳವನ್ನು ಸಂಸ್ಥೆಯ ಕಟ್ಟಡಕ್ಕಾಗಿ ಗಿಟ್ಟಿಸಿಕೊಂಡು ಭವ್ಯವಾದ ಕಟ್ಟಡವನ್ನು ನಿರ್ಮಿಸಿದರು. ಇದಕ್ಕಾಗಿ ವಿಶ್ವವಿದ್ಯಾನಿಲಯದಿಂದ 2.9 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ಇದರ ಜೊತೆಗೆ ಆ ಕಟ್ಟಡದ ನಿರ್ಮಾಣ ಕಾರ್ಯದಲ್ಲಿಯೂ ಅವರು ತೊಡಗಿದ್ದರು. ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಅದರ ನಿರ್ದೇಶಕರಾಗಿದ್ದ ಎಚ್.ದೇವೀರಪ್ಪನವರ ನೇತೃತ್ವದಲ್ಲಿ ಕವಲೊಡೆದು ಬಂದ ಸಂಪಾಧನಾ ವಿಭಾಗವನ್ನು ಕನ್ನಡ ವಿಭಾಗಕ್ಕೆ ಸೇರಿಸಿದರು. ಈ ವಿಭಾಗದ ಮೂಲಕ ಪ್ರಾಚೀನ ಕೃತಿಗಳನ್ನು ಪರಿಷ್ಕರಿಸಿ, ಪ್ರಕಟಿಸುವ ಯೋಜನೆಯನ್ನು ರೂಪಿಸಿದರು. ಕನ್ನಡ ಎಲ್ಲ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಬೇಕೆಂಬುದು ಅವರ ಉದ್ದೇಶವಾಗಿತ್ತು. ಅದಕ್ಕಾಗಿ ಪಠ್ಯಪುಸ್ತಕ ವಿಭಾಗ ಮತ್ತು ಭಾಷಾಂತರ ವಿಭಾಗವನ್ನು ಸಂಸ್ಥೆಯಲ್ಲಿ ಸ್ಥಾಪಿಸಿದರು. ಈ ವಿಭಾಗದ ಮೂಲಕ ಶಾಲಾ ಪಠ್ಯಗಳಿಂದ ಉನ್ನತ ಶಿಕ್ಷಣದವರೆಗಿನ ಎಲ್ಲಾ ಪಠ್ಯಗಳನ್ನು ಕನ್ನಡ ಮಾಧ್ಯಮದಲ್ಲಿ ಪ್ರಕಟಿಸಲು ಹಣಿಗೊಳಿಸಿದರು. ಈ ಯೋಜನೆಗಳ ಜೊತೆಗೆ ವಿಶ್ವಕೋಶ ಮತ್ತು ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳ ಪರಿಷ್ಕರಣ ಯೋಜನೆಗಳನ್ನು ಸರ್ಕಾರದ ಒಪ್ಪಿಗೆಯಿಂದ ಅಧ್ಯಯನ ಸಂಸ್ಥೆಗೆ ತಂದು ಹಾಕಿದುದು ದೇ.ಜವರೇಗೌಡರು, ಅವರ ಏಕಾಂಗಿ ಸಾಹಸ ಅದ್ಭುತ ಸಾಧನೆಯೆಂದೇ ಹೇಳಬೇಕು.

ವಿಶ್ವಕೋಶ ಯೋಜನೆಯನ್ನು ಬಹಳ ಹಿಂದೆಯೇ ಮೈಸೂರು ಸರ್ಕಾರ ಪ್ರಾರಂಭ ಮಾಡಿತ್ತು. ಈ ಯೋಜನೆಯನ್ನು ವಿದ್ಯಾ ಇಲಾಖೆಗೆ ವಹಿಸಲಾಗಿತ್ತು. ಆದರೆ ಒಂದು ಸಂಪುಟವು ಪ್ರಕಟವಾಗಿರಲಿಲ್ಲ. ಆಧುನಿಕ ಕನ್ನಡದ ಬೆಳವಣಿಗೆಯಲ್ಲಿ ಅದರ ಅಗತ್ಯವನ್ನು, ಅನಿವಾರ್ಯವನ್ನು ಮನಗಂಡ ದೇ.ಜವರೇಗೌಡರು ಅದನ್ನು ಪ್ರಕಟಿಸುವ ಹೊಣೆಯನ್ನು ಹೊರಲು ನಿರ್ಧರಿಸಿದರು. ಆದರೆ ಅದನ್ನು ವಿದ್ಯಾ ಇಲಾಖೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ತರುವುದು ಸುಲಭವಾದ ಕೆಲಸವೇನೂ ಆಗಿರಲಿಲ್ಲ. ಆಗ ಶಿಕ್ಷಣ ಮಂತ್ರಿಯಾಗಿದ್ದ ಶ್ರೀ ಕೆ.ವಿ.ಶಂಕರೇಗೌಡರ ನೆರವಿನಿಂದ ಅದನ್ನು ಸಾಧ್ಯವನ್ನಾಗಿಸಿದ ಕೀರ್ತಿ ದೇ.ಜವರೇಗೌಡರಿಗೆ ಸಲ್ಲುತ್ತದೆ. ಇಡೀ ಕರ್ನಾಟಕದ ಗಮನವೆಲ್ಲಾ ಅಧ್ಯಯನ ಸಂಸ್ಥೆಯ ಕಡೆಗೆ ತಿರುಗುವಂತೆ ಮಾಡಿದರು. ಈ ಯೋಜನೆಯ ಮೂಲಕ 14 ವಿಶ್ವಕೋಶಗಳನ್ನು ಹಾಗೂ ವಿಷಯ ವಿಶ್ವಕೋಶಗಳಾದ, ಕರ್ನಾಟಕ, ಭೂಗೋಳ, ಪ್ರಾಣಿಶಾಸ್ತ್ರ, ಇತಿಹಾಸ ಮತ್ತು ಪುರಾತತ್ವ, ಜಾನಪದ ಸಂಪುಟಗಳನ್ನು ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ.

ಬಿ.ಎಲ್.ರೈಸ್ ಬಹಳ ಹಿಂದೆ ಮೈಸೂರು ರಾಜ್ಯದ 8 ಜಿಲ್ಲೆಗಳಲ್ಲಿ ಮತ್ತು ಆಗ ಪ್ರತ್ಯೇಕ ರಾಜ್ಯವಾಗಿದ್ದ ಕೊಡಗಿನಲ್ಲಿ 8869 ಶಾಸನಗಳನ್ನು ಸಂಗ್ರಹಿಸಿದರು. ಈ ಶಾಸನಗಳನ್ನೆಲ್ಲ ಲಿಪ್ಯಾಂತರ, ಭಾಷಾಂತರಗಳೊಡನೆ ಅವರು ಎಪಿಗ್ರಾಫಿಯಾ ಕರ್ನಾಟಿಕ ಮಾಲೆಯಲ್ಲಿ ಪ್ರಕಟಿಸಿದರು. ಆದರೆ ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು. ಇಂಥ 'ಎಪಿಗ್ರಾಫಿಯಾ ಕರ್ನಾಟಿಕ' ಸಂಪುಟಗಳು ಕಳೆದ ಕೆಲವು ದಶಕಗಳಿಂದ ತುಂಬ ದುರ್ಲಭವಾಗಿದ್ದು, ಅವುಗಳು ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ ಅನಿವಾರ್ಯ ಆಕರ ಗ್ರಂಥಗಳಾಗಿದ್ದುದರಿಂದ ಅವನ್ನು ಪರಿಷ್ಕರಿಸಿ ಪುನರ್ಮುದ್ರಿಸುವ ಅವಶ್ಯಕತೆ ಬಹಳವಾಗಿತ್ತು. ಇದರ ಅಗತ್ಯತೆಯನ್ನು ಅರಿತ ಅಂದಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ದೇ.ಜವರೇಗೌಡರು ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ, ಪ್ರೊ.ಹಾ.ಮಾ.ನಾಯಕ ಅವರು ಸಮಗ್ರವಾದ ಯೋಜನೆಯ ರೂಪರೇಷೆಯನ್ನು, ನೀಲನಕ್ಷೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಅಂದಿನ ಕರ್ನಾಟಕ ಸರ್ಕಾರದ ಮುಂದಿಟ್ಟು ಒಪ್ಪಿಗೆಯ ಆದೇಶದ ಮೂಲಕ "ಎಪಿಗ್ರಾಫಿಯಾ ಕರ್ನಾಟಿಕ"ದ ಎಲ್ಲಾ ಸಂಪುಟಗಳ ಪರಿಷ್ಕರಣ ಹಾಗೂ ಪುನರ್ಮುದ್ರಣ ಯೋಜನೆ ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾದರು. ಪ್ರಸ್ತುತ ಈ ಯೋಜನೆ ಮೂಲಕ 24 ಸಂಪುಟಗಳಲ್ಲಿ 20 ಸಂಪುಟಗಳು ಪ್ರಕಟಗೊಂಡಿವೆ ಹಾಗೂ ಉಳಿದ ಸಂಪುಟಗಳ ಪರಿಷ್ಕರಣೆ ಕಾರ್ಯ ಪ್ರಗತಿಯಿಂದ ಸಾಗಿದೆ, ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ, ಪ್ರಾಧ್ಯಾಪಕರುಗಳಿಗೆ ದೊರೆಯುತ್ತವೆ.

ಜಾನಪದಕ್ಕೆ ಸಮಾಜದಲ್ಲಾಗಲಿ ವಿದ್ವತ್ಸಂಸ್ಥೆಯಲ್ಲಾಗಲಿ ಮುಖ್ಯ ಸ್ಥಾನ ಲಭಿಸಿಲ್ಲವೆಂಬ ಕೊರಗು ದೇ.ಜವರೇಗೌಡರ ಮನಸ್ಸಿನ ಮೂಲೆಯಲ್ಲಿ ಬಹು ದಿನಗಳಿಂದ ಅರಿವಿತ್ತು. ಕರ್ನಾಟಕ ಜನಪದ ಇತಿಹಾಸದಲ್ಲಿಯೆ 1967ರಲ್ಲಿ ತರೀಕೆರೆಯಲ್ಲಿ ನಡೆದ ಜನಪದ ಸಮ್ಮೇಳನವೊಂದು ಮೈಲಿಗಲ್ಲು. ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಕೆ.ಆರ್.ಲಿಂಗಪ್ಪನವರ ಪ್ರೋತ್ಸಾಹವು ವಿಶ್ವವಿದ್ಯಾನಿಲಯಗಳಲ್ಲಿ ಜನಪದ ಅಧ್ಯಯನಕ್ಕೆ ಸಂಶೋಧನೆಗಳ ವಿಷಯವಾಗುವ ತನಕ ಜನಪದ ಉಳಿಸಲು ಸಾಧ್ಯವಿಲ್ಲವೆಂದು ಹೇಳಿದ್ದರು.

ಸಮ್ಮೇಳನದಿಂದ ಮೈಸೂರಿಗೆ ಬಂದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಪ್ರೊ.ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ಮಾಲಿಯವರೊಡನೆ ಚರ್ಚಿಸಿ ಅವರ ಸಹಕಾರದೊಂದಿಗೆ 1968ರ ಸೆಪ್ಟೆಂಬರ್ ತಿಂಗಳಿನಲ್ಲಿ ಜಾನಪದ ವಿಭಾಗವನ್ನು ತೆರೆದರು. ಈ ವಿಭಾಗ **'ಜಾನಪದ ವಸ್ತು ಸಂಗ್ರಹಾಲಯ', 'ಜಾನಪದ ಕ್ಷೇತ್ರಕಾರ್ಯ' ಮತ್ತು 'ಜಾನಪದ ಪ್ರಕಟಣೆಗಳು'** ಹೀಗೆ ಮೂರು ಅಂಗಗಳ ಮೂಲಕ ಜಾನಪದ ವಿಭಾಗ ಕಾರ್ಯ ಆರಂಭಿಸಿತು. ದೇ.ಜವರೇಗೌಡರ ಪ್ರೀತಿಯ ಮತ್ತೊಂದು ಜ್ಞಾನ ಶಾಖೆಯಾಗಿತ್ತು. ದೇ.ಜವರೇಗೌಡರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ನಂತರ 1972ರಲ್ಲಿ ಜಾನಪದ ಡಿಪ್ಲೊಮಾ ತರಗತಿಯನ್ನು ಹಾಗೂ ಜಾನಪದ ಎಂ.ಎ. ತರಗತಿಯನ್ನು 1974ರಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲಿ ಅಳವಡಿಸಿದರು. ಸ್ನಾತಕೋತ್ತರ ಮಟ್ಟದಲ್ಲಿ ಜಾನಪದ ಅಧ್ಯಯನವನ್ನು ಪ್ರಾರಂಭಿಸಿದ್ದು ಭರತ ಖಂಡದಲ್ಲೇ ಹಾಗೂ ಇಡೀ ಏಷಿಯಾದಲ್ಲಿಯೇ ಪ್ರಪ್ರಥಮ ಪ್ರಯತ್ನ. ಈ ಪ್ರಯತ್ನಕ್ಕೆ ನೆರವನ್ನು ದೇ.ಜವರೇಗೌಡರಿಗೆ ನೀಡಿದ್ದು, ಕೆ.ಆರ್.ಲಿಂಗಪ್ಪನವರು. ವಿಶ್ವವಿದ್ಯಾನಿಲಯ ಅದನ್ನು ಉನ್ನತವಾದ ಗದ್ದುಗೆಗೇರಿಸಿದ ನಂತರ ಸಮಾಜದಲ್ಲಿ, ಸಂಘ ಸಂಸ್ಥೆಗಳಲ್ಲಿ, ಹಳ್ಳಿ ದಿಲ್ಲಿಗಳಲ್ಲಿ, ನಾಗರೀಕ ಸಭೆಯಲ್ಲಿ, ಆಕಾಶವಾಣಿ, ದೂರದರ್ಶನಗಳಲ್ಲಿ, ದಸರಾ ಮೊದಲಾದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಉತ್ಸವಗಳಲ್ಲಿ, ದೇಶ ವಿದೇಶಗಳಲ್ಲಿ ಅದಕ್ಕೆ ವಿಶೇಷವಾದ ಮನ್ನಣೆ ದೊರೆಯುವಂತಾಯಿತು. ಹಳ್ಳಿಗಳ ಬಡ ಗುಡಿಸಲುಗಳಲ್ಲಿ ನಾಚಿಕೆಯಿಂದ ಅವಿತುಕೊಂಡಿದ್ದ ಈ ಜಾನಪದಶ್ರೀ ನಾಗರೀಕ ವೇದಿಕೆಗಳ ಮೇಲೆಯೂ ದಿಟ್ಟ ತನದಿಂದ ಮೆರೆಯುವಂತಾಯಿತು.

**ಉಪಸಂಹಾರ**

ವಿಶ್ವವಿದ್ಯಾನಿಲಯದ ಒಂದು ಕನ್ನಡ ವಿಭಾಗ ಹೇಗೆ ಬೆಳೆಯಬಹುದು ಮತ್ತು ಹೇಗೆ ಬೆಳೆಯಬೇಕು ಎಂಬುದಕ್ಕೆ ಇದೊಂದು ಮಾದರಿಯಾಗಿದೆ. ಆಗ ಶ್ರೀ ಮಾಲಿ ಅವರ ಮುಕ್ತ ಹಸ್ತದ ನೆರವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು, ಆ ನೆರವನ್ನು ಪಡೆದು ಅದನ್ನು ಸದುಪಯೋಗ ಪಡಿಸಿಕೊಂಡ್ಡದ್ದು ದೇ.ಜವರೇಗೌಡ ಅವರ ಜಾಣ್ಮೆ ಮತ್ತು ಹಿರಿಮೆ. ತಮ್ಮ ಈ ಅಸಾಧಾರಣ ಸಾಮರ್ಥ್ಯದಿಂದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ಮಾಪಕರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ದೇ.ಜವರೇಗೌಡ. ಹೋರಾಟದ ಬದುಕು. ದೇಜಗೌ ಸಾಂಸ್ಕೃತಿಕ ಪ್ರತಿಷ್ಠಾನ. ಕಲಾ ನಿಲಯ, ಮೈಸೂರು.
- ಡಾ.ಬಿಸ್ಲೇಹಳ್ಳಿ ಪ್ರಭು ಮತ್ತು ಚಿಕ್ಕಮಗಳೂರು ಗಣೇಶ್. (2006). ಪ್ರಗತಿ ಮುಖೀ ವಿಶ್ವವಿದ್ಯಾನಿಲಯ, ಹರ್ಷ ಪ್ರಕಾಶನ, ಮೈಸೂರು.
- ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿ. ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ
- ಸಣ್ಣರಾಮೇಗೌಡ, ಎಂ.ಆರ್. (1987). ಎಪ್ಪತ್ತರ ಹೊಸ್ತಿಲಲ್ಲಿ. ದೇಜಗೌ ಸಾಂಸ್ಕೃತಿಕ ಪ್ರತಿಷ್ಠಾನ, ಕಲಾನಿಲಯ, ಮೈಸೂರು.